**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 117/2021**

**ಚಾ.ಸಾ. :01**

**ಫ್ರಾ.ಸಾ. : 01**

| | |
|---|---|
| ಸಾಕ್ಷಿಯ ಹೆಸರು | : ಸತ್ಯಪ್ಪ ಹುಕ್ಕೇರಿ, |
| ತಂದೆಯ ಹೆಸರು | : ಅಪ್ಪಯ್ಯ ಹುಕ್ಕೇರಿ, |
| ವಯಸ್ಸು | : 64 ವರ್ಷ |
| ಉದ್ಯೋಗ | : ನಿವೃತ್ತ ಪಿ.ಎಸ್.ಐ |
| ವಾಸ | : ಮನಗುತ್ತಿ ಗ್ರಾಮ,  ಹುಕ್ಕೇರಿ ತಾಲೂಕು, ಬೆಳಗಾವಿ ಜಿಲ್ಲೆ. |

**ದಿನಾಂಕಃ 10-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ  ಮಾನ್ಯ ಸರಕಾರಿ ಅಭಿಯೋಜಕರಿಂದ**

1. ನಾನು 2014-2015 ನೇ ಸಾಲಿನಲ್ಲಿ ಶಿರಸಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಅಪರಾಧ ವಿಭಾಗದ ಆರಕ್ಷಕ ಉಪ ನಿರೀಕ್ಷಕನಾಗಿ ಕೆಲಸ ನಿರ್ವಹಿಸಿರುತ್ತೇನೆ.

2. ದಿನಾಂಕಃ 12.05.2015 ರಂದು ಸಾಯಂಕಾಲ 4.00 ಗಂಟೆಗೆ ನಾನು ನಮ್ಮ ಠಾಣೆಯ ಸಿಬ್ಬಂದಿ ಚಾಸಾ-18 ಇವರನ್ನು ಕರೆದುಕೊಂಡು ಅವರ ಸಂಗಡ ನಮ್ಮ ಠಾಣೆಯ ಕಳುವು ಪ್ರಕರಣಗಳ ಆರೋಪಿತರ ಪತ್ತೆಯ ಕುರಿತು ನನಗೆ ಠಾಣೆಯಲ್ಲಿ ನೀಡಲಾದ ಬೈಕ್ ನಂಬರ ಕೆಎ-30-ಜೆ-345 ರ ಮೇಲೆ ಶಿರಸಿ ತಾಲೂಕಿನ ಎಕ್ಕಂಬಿಯ ಕಡೆಗೆ ಹೋಗಿ ಎಕ್ಕಂಬಿಯ ಪಾರೆಸ್ಟ ನಾಕಾ ಹತ್ತಿರ ನಿಂತುಕೊಂಡು ವಾಹನಗಳ ತಪಾಸಣೆ ಮಾಡುತ್ತಿದ್ದೆ. ಆಗ ಸಾಯಂಕಾಲ 5.00 ಗಂಟೆಗೆ ಬಿಸಿಲುಕೊಪ್ಪ ಕಡೆಯಿಂದ ಶಿರಸಿ ಕಡೆಗೆ ಒಂದು ಕಾರು ಬಂದು, ನಾವು ನಿಂತ ಸ್ಥಳದಿಂದ ಸ್ವಲ್ಪ ದೂರದಲ್ಲಿ ವಾಹನವನ್ನು ರಸ್ತೆ ಬದಿಯಲ್ಲಿ ನಿಲ್ಲಿಸಿಕೊಂಡಿದ್ದರು. ಅವರನ್ನು ನೋಡಿ ನನಗೆ ಸಂಶಯ ಬಂದು ನಾನು ಮತ್ತು ಚಾಸಾ- 18 ರವರು ಸದರಿ ಕಾರಿನ ಬಳಿಗೆ ಹೋಗುತ್ತಿದ್ದಂತೆ, ಕಾರಿನಲ್ಲಿದ್ದ ಇಬ್ಬರು ವ್ಯಕ್ತಿಗಳು ಪೊಲೀಸ್  ಸಮವಸ್ತ್ರದಲ್ಲಿ ನಮ್ಮನ್ನು ನೋಡಿ, ಕಾರಿನಿಂದ ಇಳಿದು ಓಡಿ ಹೋಗಿರುತ್ತಾರೆ. ನಾವು ಅವರನ್ನು ನೋಡಿ ಸಂಶಯಪಟ್ಟು ಹಿಡಿಯಲು ಬೆನ್ನು ಹತ್ತಿದ್ದು, ಅವರು ಸಿಗದೇ ಬದಿಯ ಅರಣ್ಯ ಪ್ರದೇಶದಲ್ಲಿ ಓಡಿ ಹೋಗಿ ಕಣ್ಮರೆಯಾಗಿರುತ್ತಾರೆ. ಕೂಡಲೇ ನನಗೆ ಅವರು ಕಾರಿನಲ್ಲಿ ಕಾನೂನು ಬಾಹಿರವಾಗಿ

ವಸ್ತುಗಳನ್ನು ಸಾಗಾಟ ಮಾಡುತ್ತಿರಬಹುದಾಗಿ ಸಂಶಯ ಬಂದಿದ್ದರಿಂದ, ನಾನು ನನ್ನೊಡನೆ ಇದ್ದ ನನ್ನ ಸಿಬ್ಬಂದಿ ಚಾಸಾ–18 ರವರ ಸಹಾಯದಿಂದ ಪಂಚರಾದ ಚಾಸಾ–2 ಮತ್ತು 3 ರವರನ್ನು ಸ್ಥಳಕ್ಕೆ ಬರ ಮಾಡಿಕೊಂಡಿರುತ್ತೇನೆ ಹಾಗೂ ಅವರಿಗೆ ವಿಷಯ ತಿಳಿಸಿ, ಪಂಚನಾಮೆಗೆ ಸಹಕರಿಸಬೇಕೆಂದು ಕೋರಿಕೊಂಡಿರುತ್ತೇನೆ. ನಂತರ ಪಂಚರ ಸಮಕ್ಷಮ ಕಾರನ್ನು ಪರಿಶೀಲಿಸಿದಾಗ ಅದು ಇಂಡಿಕಾ ಕಾರ್ ಆಗಿದ್ದು, ಅದರ ನೊಂದಣಿ ಸಂಖ್ಯೆ ಕೆಎ–22/ಎನ್–5218 ಆಗಿದ್ದು, ಕಾರಿನ ಬಾಗಿಲನ್ನು ತೆಗೆದು ಪರಿಶೀಲಿಸಿದಾಗ, ಕಾರಿನ ಹಿಂದಿನ ಸಿಟಿನ ಮೇಲಿ ಆರು ರಟ್ಟಿನ ಬಾಕ್ಸಗಳು ಇದ್ದವು. ರಟ್ಟಿನ ಮೇಲೆ DECCON POWER CAPSENSITIVE EMULSION EXPLOSIVE ಎಂಬ ಮುದ್ರಣ ಇತ್ತು. ಪ್ರತಿ ಬಾಕ್ಸಿನಲ್ಲಿ 200 ಪೆಸ್ಟ ನಮೂನೆಯ ಪದಾರ್ಥ ಹೊಂದಿದ್ದ ಪ್ಲಾಸ್ಟಿಕ್ ಟ್ಯೂಬ್ ಗಳು ಒಟ್ಟೂ 1200 ಇದ್ದವು. ಹಿಂಬದಿಯ ಸಿಟಿನ ಕೆಳಬದಿಯಲ್ಲಿ ಒಂದು ಸಿಮೆಂಟ್ ಚೀಲವಿದ್ದು, ಅದನ್ನು ಬಿಚ್ಚಿ ನೋಡಲಾಗಿ ಅದರಲ್ಲಿ 24 ಹಾಳೆಯ ಕವರಗಳು ಇದ್ದು, ಪ್ರತಿ ಕವರಿನಲ್ಲಿ 50 ರಂತೆ ಒಟ್ಟೂ 1200 ALUMINIUM INSTANTANEOUS ELECTRIC DETONATOR ಇದ್ದವು. ನಂತರ ಕಾರಿನ ಡಿಕ್ಕಿಯನ್ನು ತೆಗೆದು ನೋಡಲು POTIMEX AMMONIUM NITRATE ಎಂದು ಮುದ್ರಿಸಿದ ಮೂರು ಚೀಲಗಳು ಇದ್ದವು ಮತ್ತು ಪ್ರತಿ ಚೀಲದಲ್ಲಿ 50 ಕೆ.ಜಿ ಅಮೋನಿಯಂ ನೈಟ್ರೇಟ್ ತುಂಬಿತ್ತು. ಅವುಗಳನ್ನು ನೋಡಿದಾಗ ಅವರು ತಮ್ಮ ಬಳಿ ಯಾವುದೇ ಪಾಸ್ ಮತ್ತು ಪರ್ಮಿಟ್ ಇಲ್ಲದೇ ಸ್ಪೋಟಕ ವಸ್ತುಗಳನ್ನು ಸಾಗಾಟ ಮಾಡುತ್ತಿರುವುದು ಕಂಡು ಬಂದಿದ್ದರಿಂದ ಅವುಗಳನ್ನು ಪುರಾವೆಯ ಕುರಿತು ಪಂಚರ ಸಮಕ್ಷಮ ಪಂಚನಾಮೆ ಮಾಡಿ ಜಪ್ತುಪಡಿಸಿಕೊಂಡೆನು ಮತ್ತು ಮೇಲೆ ಹೇಳಿದ ಕಾರನ್ನು ಸಹಾ ನಾನು ಜಪ್ತುಪಡಿಸಿಕೊಂಡಿರುತ್ತೇನೆ.

3. ಪಂಚನಾಮೆಯನ್ನು ಸಂಜೆ 5.30 ರಿಂದ 6.30 ಗಂಟೆಯವರೆಗೆ ಸ್ಥಳದಲ್ಲಿಯೇ ಚಾಸಾ–18 ರವರಿಂದ ನನ್ನ ಉಕ್ತಲೇಖನದಂತೆ ಬರೆಸಿರುತ್ತೇನೆ. ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು, ಸಾಕ್ಷಿ ಗುರುತಿಸಿದ ಪಂಚನಾಮೆಯನ್ನು ನಿಪಿ–1 ಎಂದು, ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಗಳನ್ನು ನಿಪಿ–1(ಎ) ಮತ್ತು 1(ಬಿ) ಎಂದು ಗುರುತಿಸಲಾಯಿತು.

ಚಪ್ತಾದ ಮು.ಮಾಗಳು ಹಾಗೂ ಪಂಚನಾಮೆಯೊಂದಿಗೆ ಠಾಣೆಗೆ ಹಾಜರಾಗಿ ಸರಕಾರದ ಪರವಾಗಿ ಪಿರ್ಯಾದನ್ನು ದಾಖಲಿಸಿರುತ್ತೇನೆ. ನಾನು ಸಲ್ಲಿಸಿದ ಪಿರ್ಯಾದನ್ನು ನೋಡುತ್ತಿದ್ದು, ಸಾಕ್ಷಿ ಗುರುತಿಸಿದ ಪಿರ್ಯಾದನ್ನು ನಿಪಿ–2 ಎಂದು, ಸಾಕ್ಷಿಯು ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು. ನಾನು ಜಪ್ತುಪಡಿಸಿದ ಮು.ಮಾಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದಿರುವ 1 ನೇ ಆರೋಪಿ ಮಾರುತಿ ಹಾಗೂ 2 ನೇ ಆರೋಪಿ ಪರಶುರಾಮ ಇವರು ಸ್ಥಳದಿಂದ ಓಡಿ ಹೋದ ಆರೋಪಿತರಾಗಿರುತ್ತಾರೆ. ದಿನಾಂಕಃ 17.05.2015 ರಂದು ನಾನು ತನಿಖಾಧಿಕಾರಿಗಳ ಆದೇಶದಂತೆ ನನ್ನ ಸಂಗಡ ಚಾಸಾ–18 ರವರನ್ನು ಕರೆದುಕೊಂಡು 1 ಮತ್ತು 2 ನೇ ಆರೋಪಿತರ ಶೋಧನೆಗೆ ಹೊರಟಿದ್ದು, ಅದೇ ದಿನ ಸವಣೂರು ತಾಲೂಕಿನ ಮಾರುತಿಪುರದಲ್ಲಿ 1 ನೇ ಆರೋಪಿತನನ್ನು ವಶಕ್ಕೆ ಪಡೆದುಕೊಂಡು ದಿನಾಂಕಃ 18.05.2015 ರಂದು ಬೆಳಗಿನ ಜಾವಾ 5.00 ಗಂಟೆಗೆ ತನಿಖಾಧಿಕಾರಿಗಳ ಸಮಕ್ಷಮ ಹಾಜರುಪಡಿಸಿರುತ್ತೇನೆ ಹಾಗೂ ಈ ಬಗ್ಗೆ ನಾನು ತನಿಖಾಧಿಕಾರಿಯವರ ಮುಂದೆ ಮರು ಹೇಳಿಕೆಯನ್ನು ನೀಡಿರುತ್ತೇನೆ.

4. ತನಿಖಾಧಿಕಾರಿಗಳು ಪುನಃ ನನಗೆ 2 ನೇ ಆರೋಪಿತನ ಶೋಧ ಕಾರ್ಯಕ್ಕೆ ನೇಮಿಸಿದ್ದು, ಆತನನ್ನು ನಾನು ದಿಃ 15.06.2015 ರಂದು ಬೆಳಗಿನ ಜಾವ 3.00 ಗಂಟೆಗೆ ಕುಂದಾಪುರ ತಾಲೂಕಿನ ಕೊಲ್ಲುರು ಸಮೀಪದ ಮೈದಾನ ಎಂಬ ಊರಿನಲ್ಲಿ ವಶಕ್ಕೆ ಪಡೆದುಕೊಂಡು ಬೆಳಗಿನ 7.00 ಗಂಟೆಗೆ ತನಿಖಾಧಿಕಾರಿಗಳ ಸಮಕ್ಷಮ ಹಾಜರಪಡಿಸಿ ಪುನಃ ಮರು ಹೇಳಿಕೆಯನ್ನು ನೀಡಿರುತ್ತೇನೆ.

(ಈ ಹಂತದಲ್ಲಿ ಈ ಪ್ರಕರಣದಲ್ಲಿ ವಶಪಡಿಸಿದ ಸ್ವತ್ತುಗಳನ್ನು ಈವರೆಗೆ ಹಾಜರಪಡಿಸದೇ ಇರುವುದರಿಂದ ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

Sd/-

(ಪರಮೇಶ್ವರ ಪ್ರಸನ್ನ ಬಿ.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ